ಇಲ್ಲದಂತೆ ನಳಿನಿಗೆ ಚಹಾಕ್ಕೆಂದು ಅಡುಗೆಮನೆಯ ಬಾಲ್ಕನಿಯಲ್ಲಿ ಹಾರ್ಲಿಕ್ಸ್ ಡಬ್ಬಿಯಲ್ಲಿ ಬೆಳೆಸಿದ್ದ ಗೌತಿ ಚಹಾ ಕತ್ತರಿಸಿಕೊಡುತ್ತಿದ್ದಾರೆ, ನಡುನಡುವೆ ಅಲ್ಲೇ ನೆಲದ ಮೇಲೆ ಬೋರಲು ಬಿದ್ದು ಚಿತ್ರಕ್ಕೆ ಬಣ್ಣ ತುಂಬುತ್ತಿದ್ದ ರಾಹುಲನಿಗೆ, “ಆಕಾಶಕ್ಕೆ ನೀಲಿ, ಗಿಡಕ್ಕೆ ಹಸಿರು” ಇತ್ಯಾದಿ ಸೂಚನೆ ಕೊಡುತ್ತಿದ್ದಾರೆ. ಯಾಕೋ ರಮೇಶನಿಗೆ ತಾ ಚಿತ್ರದ “ಆಡ್ ಮ್ಯಾನ್ ಔಟ್”ನಂತೆ ಭಾಸವಾಯಿತು.

ಕೆಲವೇ ದಿನಗಳಲ್ಲಿ ರಾಮರಾಯರು ನಳಿನಿ ಕೇಳಿದಾಗೆಲ್ಲ ಅಲ್ಲೇ ಅಪಾರ್ಟ್‌ಮೆಂಟಿನ ಹಿಂದಿದ್ದ ಬಜಾರಿನಿಂದ ಕಾಯಿಪಲ್ಲೆ ತಂದುಕೊಡುವುದು, ಗಿರಣಿಯಿಂದ ಗೋಧಿಹಿಟ್ಟಿನ ಡಬ್ಬಿ ಭುಜದ ಮೇಲೆ ಹೊತ್ತು ತರುವುದು, ರಾಹುಲನನ್ನು ಶಾಲೆಯಿಂದ ಕರಕೊಂಡು ಬರುವುದು ಇತ್ಯಾದಿ ಮಾಡಲು ಶುರುಮಾಡಿದಾಗ ಏನೋ ಹೇಳಲಾಗದ ಅಸಹನೆ ಇವನಿಗೆ. ಇಷ್ಟು ನುಣ್ಣಗೆ ಚೆಂದ ಚೆಂದ ಮಾತಾಡುತ್ತ ನಮ್ಮಲ್ಲಿ ಒಂದಾಗಲು ಹೊರಟ ಅಪ್ಪನ ಪರಿ ತನ್ನ ಮನೆಯಲ್ಲೇ ತನ್ನನ್ನು ಪರಕೀಯ ಮಾಡಲು ಹೊರಟ ಹುನ್ನಾರಿನಂತೆ ಭಾಸವಾಗತೊಡಗಿತ್ತವನಿಗೆ. ‘ಇಲ್ಲ ಹೀಗಾಗಲು ಬಿಡಬಾರದು. ಇದು ನನ್ನ ಮನೆ; ಬಾಗಲಕೋಟೆಯ ಅವರ ಮನೆಯಲ್ಲ ಅಂತ ತಿಳಿಯೋ ಹಂಗ ಎಲ್ಲಾಕಡೆ ಛಾಪು ಒತ್ತಬೇಕು’ ಅಂತ ಠರಾಯಿಸಿಬಿಟ್ಟ ರಮೇಶ. ಮುಂಜಾನೆ ಸ್ನಾನ ಮಾಡಿ ಮೈ ಒರೆಸಿಕೊಳ್ಳುತ್ತಾ ಅವರ ಕೋಣೆಗೆ ಹೋಗಿ, ಅವರನ್ನು ಮಾತಾಡಿಸಿದಂತೆ ಮಾಡಿ ತನ್ನ ಹಸಿ ಟಾವೆಲ್ ಅಲ್ಲೇ ಅವರ ಹಾಸಿಗೆಯ ಮೇಲೆ ಒಗೆದು ಬರುವುದು, ಅವರು ಭಾಗವತ ಓದುತ್ತ ಕುಳಿತಾಗಲೇ

